# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 557 |
| ಸದಸ್ಯರ ಹೆಸರು | : | ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ಬೀದರ್ ಜಿಲ್ಲೆಯಲ್ಲಿ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ವ್ಯಾಪ್ತಿಯಲ್ಲಿ ಕಳೆದ 2 ವರ್ಷದಲ್ಲಿ ಹಂಚಿಕೆಯಾದ ಮಳಿಗೆ ಮತ್ತು ನಿವೇಶನಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ಬೀದರ್ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದಿಂದ ಕಳೆದ 02 ವರ್ಷಗಳಲ್ಲಿ ಹಂಚಿಕೆ ಮಾಡಿರುವ ನಿವೇಶನ ಮತ್ತು ಮಳಿಗೆಗಳ ಕೈಗಾರಿಕಾ ವಸಾಹತುವಾರು ಮಾಹಿತಿ ಈ ಕೆಳಗಿನಂತಿದೆ:
<table>
<tr><th rowspan="3">ಕ್ರ. ಸಂ</th><th rowspan="3">ಕೈಗಾರಿಕಾ ವಸಾಹತು</th><th colspan="4">ಕಳೆದ 2 ವರ್ಷಗಳಲ್ಲಿ ಹಂಚಿಕೆ ಮಾಡಿರುವ ನಿವೇಶನ ಮತ್ತು ಮಳಿಗೆಗಳ ಸಂಖ್ಯೆ</th></tr>
<tr><th colspan="2">2023-24</th><th colspan="2">2024-25</th></tr>
<tr><th>ಮಳಿಗೆ</th><th>ನಿವೇಶನ</th><th>ಮಳಿಗೆ</th><th>ನಿವೇಶನ</th></tr>
<tr><td>1</td><td>ಕೋಲ್ಹಾರ್</td><td>-</td><td>2</td><td>-</td><td>-</td></tr>
<tr><td>2</td><td>ಹುಮನಬಾದ್ 2ನೇ ಹಂತ</td><td>-</td><td>7</td><td>-</td><td>-</td></tr>
</table>
</td></tr>
<tr><td>ಆ)</td><td>ಈ ಮಳಿಗೆ ಮತ್ತು ನಿವೇಶನ ಹಂಚಿಕೆ ಮಾಡಲು ಯಾವ ಯಾವ ಮಾನದಂಡಗಳನ್ನು ಅನುಸರಿಸಲಾಗಿದೆ? (ಮಾಹಿತಿ ನೀಡುವುದು)</td><td>1. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ ಖಾಲಿ ಇರುವ ಮಳಿಗೆ ಮತ್ತು ನಿವೇಶನ ಹಂಚಿಕೆ ಕುರಿತು ಅಧಿಸೂಚನೆ ಹೊರಡಿಸಲಾಗುತ್ತದೆ.<br>2. ಅಧಿಸೂಚನೆ ಅನ್ವಯ ಸ್ವೀಕರಿಸಿದ ಅರ್ಜಿಗಳನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ ಪರಿಶೀಲಿಸಿ ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಜರುಗುವ ಉಪಸಮಿತಿಯಲ್ಲಿ ಪರಿಶೀಲನೆಯನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮವು ನಿಗದಿಪಡಿಸಿದ ಮಾನದಂಡಗಳ ಅನುಸಾರ ಅಂಕಗಳನ್ನು ನೀಡಿ, ಹೆಚ್ಚಿನ ಅಂಕಗಳಿಸಿರುವ ಅರ್ಜಿದಾರರಿಗೆ ಹಂಚಿಕೆ ಕುರಿತು ನಡವಳಿಯನ್ನು ಮಾಡಲಾಗುತ್ತದೆ.<br>3. ಉಪ ಸಮಿತಿಯ ಶಿಫಾರಸ್ಸನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗುವ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗೆ ಮಂಡಿಸಿ ಅನುಮೋದನೆ ಮತ್ತು ಹಂಚಿಕೆ ಮಾಡಲಾಗುತ್ತಿದೆ.</td></tr>
</table>

ಸಿಐ 42 ಸಿಎಸ್‌ಸಿ 2025

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು.